ಇನ್ನೊಂದು ಬದಿಯಲ್ಲಿ ನಿಂತಿದ್ದ ಪ್ರೇಮಿಗಳಿಬ್ಬರು ಒಂದೇ ಐಸ್ ಕ್ರೀಮ್‌ನ್ನು ಹಂಚಿಕೊಂಡು ತಿನ್ನುತ್ತಿದ್ದರು. ಅದನ್ನು ನೋಡಿದ ಮಾದೇವನ ಬಾಯಲ್ಲಿ ನೀರೂರಿತು. ತಾನೀಗ ಏನಾದರೂ ತಿನ್ನದೇ ಇದ್ದರೆ ಸತ್ತೇ ಹೋಗುತ್ತೇನೆ ಎಂದುಕೊಂಡ.

ಬಿಸಿಲೇರುವ ಹೊತ್ತು. ಡೂಗು ಬೆನ್ನಿನ ಗುರಪ್ಪ ಎಂದಿನಂತೆ ಒತ್ತುಗಾಡಿಯಲ್ಲಿ ಐದಾರು ತುಂಬಿದ ಕೊಡಗಳನ್ನಿರಿಸಿಕೊಂಡು ಬೇಕರಿ ಮತ್ತು ಲಿಂಗಾಯತ ಖಾನಾವಳಿಗೆ ನೀರು ಹಾಕಲು ಹೊರಟಿದ್ದ. ರಸ್ತೆ ತುಸು ಏರು ಪ್ರದೇಶದಲ್ಲಿ ಇರುವುದರಿಂದ, ಒತ್ತಿಕೊಂಡು ಮುಂದಕ್ಕೆ ಹೋಗಲಾಗದೆ ದಮ್ಮಿಸುತ್ತ ನಿಂತು ಸುತ್ತಲೂ ಕಣ್ಣಾಡಿಸಿದ. ತಂಗುದಾಣದಲ್ಲಿ ಕೂತಿದ್ದ ಮಾದೇವನನ್ನು ಕಂಡು ದಣಿದ ಧ್ವನಿಯಲ್ಲಿ 'ಏ ತಮ್ಮಾ ತುಸು ಬಾರೋ...' ಎಂದು ಸಹಾಯಕ್ಕಾಗಿ ಅಂಗಲಾಚಿದ. ಮಾದೇವ ಅವನನ್ನು ಮೇಲಿನಿಂದ ಕೆಳಗೊಮ್ಮೆ ನೋಡಿದ. ಗುರಪ್ಪನ ಮೈತುಂಬ ಬೆವರು ಹರಿಯುತ್ತಿತ್ತು. ನಿತ್ರಾಣಗೊಂಡಿದ್ದ. ಏನು ತಿಳಿಯಿತೋ ಏನೋ! ಅವಸರದಲ್ಲಿ ಎದ್ದು ಒತ್ತುಗಾಡಿ ಒಯ್ದು ಗುರಪ್ಪ ಹೇಳಿದ ಖಾನಾವಳಿ ಮತ್ತು ಬೇಕರಿಗೆ ನೀರು ಹಾಕಿ ಬಂದ. ಮಾದೇವನ ಉಪಕಾರಕ್ಕೆ ಗುರಪ್ಪ ಬೇಕರಿಯಲ್ಲಿಯ ಬನ್, ಎಗ್‌ಪಫ್, ಬಿಸ್ಕತ್ತು ತಂದುಕೊಟ್ಟ. ಅದನ್ನು ನೋಡಿ ಮಾದೇವನಿಗೆ ಹೋದ ಜೀವ ಮರಳಿ ಬಂದಂತಾಯಿತು. ಊರಲ್ಲಿದ್ದಾಗ 'ಕೊಡವ್ನು ಎಲ್ಲಿದ್ರು ಕೊಡ್ತಾನ... ಮೈಮುರ್ದು ದುಡಿಬೇಕು' ಎಂದು ಹೇಳುತ್ತಿದ್ದ ದುಂಡವ್ವ ಆಯಿಯ ಮಾತುಗಳು ಅವನಿಗೆ ನೆನಪಾದವು. ನಾಯಿಗೂ ಸ್ವಲ್ಪ ಹಾಕಿ ತಾನೂ ತಿಂದ. ನಾಯಿ ಬಾಲ ಅಲ್ಲಾಡಿಸಿಕೊಂಡು ಅವನ ಸುತ್ತಲೇ ಗಿರಕಿ ಹೊಡೆಯುತ್ತ ಹರ್ಷ ವ್ಯಕ್ತಪಡಿಸಿತು. ಅವನ ಈ ದಿನಚರಿ ಯಥಾಪ್ರಕಾರ ಮರುದಿನವೂ ಮುಂದುವರೆಯಿತು.

ಮಾದೇವ ಹಗಲು ಹೊತ್ತಿನಲ್ಲಿ ಅಲ್ಲಿ ಇಲ್ಲಿ ತಿರುಗಾಡುತ್ತ, ಸಾಕೆನ್ನಿಸಿದಾಗ ತಂಗುದಾಣಕ್ಕೆ ಬಂದು, ಮತ್ತೆ ಮತ್ತೆ ಕಸ ಗುಡಿಸಿ, ಅಲ್ಲಿನ ಜಾಲಿ ಕಂಟಿಗಳನ್ನು ಕಡಿದು ಶುಚಿ ಮಾಡಿದ. ದಿನೇದಿನೇ ಅಲ್ಲಿನ ವಾತಾವರಣ ಹೊಸ ರೂಪ ಪಡೆಯುತ್ತಲಿತ್ತು. ರಸ್ತೆಯ ಇನ್ನೊಂದು ಬದಿಯಲ್ಲಿ ವಾಸನೆ ತಾಳದೆ ಮೂಗು ಮುಚ್ಚಿಕೊಂಡು ಬಸ್ಸಿಗಾಗಿಯೋ... ಆಟೋಗಾಗಿಯೋ ಕಾಯುತ್ತ ನಿಲ್ಲುತ್ತಿದ್ದ ಜನರೀಗ ಬಿಸಿಲಿನ ಝಳ ತಾಳದೆ ಒಬ್ಬೊಬ್ಬರಾಗಿ ತಂಗುದಾಣದೊಳಗೆ ಬಂದು ನಿಲ್ಲತೊಡಗಿದರು.

ಕೆಲವೇ ದಿನಗಳಲ್ಲಿ ಮಾದೇವ ಒತ್ತುಗಾಡಿಯಲ್ಲಿ ನೀರು ತಂದು ಹಾಕುವ ಗುರಪ್ಪನ ಕಾಯಕವನ್ನು ತಾನು ವಹಿಸಿಕೊಂಡು ಸುತ್ತಮುತ್ತಲಿನ ಅಂಗಡಿಯವರಿಗೆಲ್ಲ ಪರಿಚಿತನಾದ. ಅವನು ಕೈ ಚಾಚುವುದಷ್ಟೇ ತಡ ಬೇಕರಿಯಲ್ಲಿಯ ತಿನಿಸುಗಳು, ಖಾನಾವಳಿಯ ಊಟ, ಖರ್ಚಿಗೆ ಅಷ್ಟಿಷ್ಟು ಹಣ ಸಿಗಲಾರಂಭಿಸಿತು.

ಆ ದಿನ ರಾತ್ರಿ ಮಾದೇವ ನಿದ್ರೆ ಬರದೆ ತಂಗುದಾಣದೆದುರಿಗಿನ ಬೀದಿ ದೀಪಗಳ ಕೆಳಗಿದ್ದ. ಅವನ ನೆರಳು ಏಕಕಾಲದಲ್ಲಿ ಎರಡು ಮೂರು ಕಡೆ ಬೇರೆ ಬೇರೆ ಆಕಾರದಲ್ಲಿ ಚಾಚಿಕೊಂಡಿತ್ತು. ಪುಟ್ಟ ಮಕ್ಕಳಂತೆ ಹಿಂದೆ ಮುಂದೆ ಹೆಜ್ಜೆ ಹಾಕುತ್ತ ತನ್ನ ನೆರಳಿನ ಜೊತೆ ಆಟದಲ್ಲಿ ಮಗ್ನನಾದ. ಇದನ್ನು ನೋಡಿ ಅನುಮಾನಗೊಂಡ ನೈಟ್ ರೌಂಡ್ಸ್ ಮೇಲಿದ್ದ ಪೊಲೀಸ್ ಪೇದೆ ಮಾದೇವನನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ 'ಇದುವರೆಗೂ ಎಷ್ಟು ಮನೀ ಕಳ್ಳತನ ಮಾಡಿದಿ? ನಿನ್ನ ಮುಂದಿನ ಪ್ಲಾನ್ ಏನು? ನಿಮ್ಮ ಟೀಮ್‌ನಲ್ಲಿ ಒಟ್ಟು ಎಷ್ಟು ಜನ ಅದಿರಿ?' ಹೀಗೆ ಅವನಿಗೆ ಯಾವ ರೀತಿಯಿಂದಲೂ ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳುತಲಿದ್ದ. ಭಯಭೀತನಾದ ಮಾದೇವ ತುಟಿ ಪಿಟಕ್ಕೆನ್ನದೆ ಗರ ಬಡಿದವರಂತೆ ಸುಮ್ಮನೆ ಕೂತ. ಕೊನೆಗೆ ಒತ್ತಾಯಪೂರ್ವಕವಾಗಿ ಒಂದು ಗ್ಲಾಸ್ ನೀರು ಕುಡಿಸಿ, 'ಆಯ್ತು... ನಿನ್ನ ಹೆಸರಾದ್ರು ಹೇಳು? ಬರಕೊಂಡು ಬಿಡ್ತೀನಿ' ಎಂದ.

'ಮಾದೇವ'

'ಪೂರ್ತಿ ಹೇಳೊ ಬೋಸಡಿಕೆ... ನಿಂದು... ನಿಮ್ಮಪ್ಪಂದು... ಅಡ್ಡ ಹೆಸರು'

ಮಾದೇವ ಮತ್ತೆ ಮೌನ ತಾಳಿದ.

'ಹೇಳು... ನಿಮ್ಮಪ್ಪನ ಹೆಸರು ಹೇಳು?' ಎಂದು ಜೋರು ಮಾಡಿದ.

ಊಹ್ಞೂಂ... ಮಾದೇವ ತಲೆ ಎತ್ತಿ ಸಹ ನೋಡಲಿಲ್ಲ. ತಾಳ್ಮೆ ಕಳೆದುಕೊಂಡ ಪೊಲೀಸ್ ಪೇದೆ 'ಎಂತೆಂಥವರು ಬರ್ತಿರಲೇ... ನಮ್ಮ ತಲಿ ತಿನ್ನಾಕ ಸೂಳೆಮಕ್ಳಾ' ಎನ್ನುತ್ತ ಅವನ ತಲೆಗೂದಲ ಹಿಡಿದು ಜಗ್ಗಿ, ಕಪಾಳಕ್ಕೆ ಒಂದು ಛಟಾರನೆ ಏಟು ಕೊಟ್ಟ. ಮಾದೇವನ ಕಣ್ಣಿಗೆ ಎಲ್ಲವೂ ಮಂಜುಮಂಜಾಗಿ ಕಾಣತೊಡಗಿತು. ಇದೆಲ್ಲವೂ